ವಿಫಲಗೊಂಡಿದ್ದು, ಈ ಪೈಕಿ 236 ಸಂಖ್ಯೆಯ ಪರಿವರ್ತಕಗಳನ್ನು ಬದಲಾಯಿಸಲಾಗಿದೆ.

ನಗರ ಪ್ರದೇಶಗಳಲ್ಲಿ ಮತ್ತು ಕುಡಿಯುವ ನೀರಿನ ಸ್ಥಾವರಗಳ ವಿಫಲವಾದ ಪರಿವರ್ತಕಗಳನ್ನು 24 ಗಂಟೆಯಲ್ಲಿ, ಗ್ರಾಮೀಣ ಪ್ರದೇಶದಲ್ಲಿ ವಿಫಲವಾದ ಪರಿವರ್ತಕಗಳನ್ನು 48 ಗಂಟೆಯಲ್ಲಿ ಹಾಗೂ ರೈತರ ಕೃಷಿ ಪಂಪ್‌ಸೆಟ್‌ಗಳ ವಿಫಲವಾದ ಪರಿವರ್ತಕಗಳನ್ನು 72 ಗಂಟೆಯಲ್ಲಿ ಬದಲಾಯಿಸಲಾಗುತ್ತಿದೆ. ವಿಫಲವಾದ ಪರಿವರ್ತಕಗಳನ್ನು ಬದಲಾಯಿಸಲು ವಿಭಾಗ ಮಟ್ಟದಲ್ಲಿ ಪರಿವರ್ತಕ ಬ್ಯಾಂಕ್ ಅನ್ನು ತೆರೆಯಲಾಗಿರುತ್ತದೆ ಹಾಗೂ ತ್ವರಿತವಾಗಿ ವಿಫಲಗೊಂಡ ಪರಿವರ್ತಕಗಳನ್ನು ದುರಸ್ತಿ ಮಾಡಲು ತಾಲ್ಲೂಕುವಾರು ದುರಸ್ತಿ ಕೇಂದ್ರಗಳನ್ನು ತೆರೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.

(ಇ) ರಾಯಭಾಗ ತಾಲ್ಲೂಕಿನಲ್ಲಿ ರೈತರ ಜಮೀನುಗಳಿಗೆ ಅಳವಡಿಸಿರುವ ಪರಿವರ್ತಕಗಳ ವಿವರಗಳು ಕೆಳಕಂಡಂತಿವೆ.

110 ಕೆ. ವಿ. ಎ.	1,468 ಸಂಖ್ಯೆಗಳು
63 ಕೆ. ವಿ.	3,183 ಸಂಖ್ಯೆಗಳು

ಹೊಸ ಕೆ. ಇ. ಬಿ. ಸಬ್ ಸ್ಟೇಷನ್‌ಗಳ ಸ್ಥಾಪನೆ

870 (1338); ಶ್ರೀ ಆನಂದ ಸಿಂಗ್ (ವಿಜಯನಗರ–ಬಳ್ಳಾರಿ)

(ಅ) ಹೊಸಪೇಟೆ ತಾಲ್ಲೂಕಿನ ವಿಜಯನಗರ ಮತಕ್ಷೇತ್ರ ವ್ಯಾಪ್ತಿಯ ಬೈಲು ವದ್ದಿಗೆರೆ ಗ್ರಾಮ ಹಾಗೂ ಹೊಸಪೇಟೆ ನಗರದ ಉತ್ತರದಲ್ಲಿ 110 ಕೆ. ವಿ. ಸಬ್ ಸ್ಟೇಷನ್ ಸ್ಥಾಪನೆ ಮಾಡಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಸರ್ಕಾರ ಯಾವ ಯಾವ ಕ್ರಮ ಕೈಗೊಂಡಿದೆ; ಯಾವಾಗ ಪ್ರಾರಂಭಿಸಲಾಗುವುದು ಮತ್ತು ಈ ಬಗ್ಗೆ ಸ್ಥಳ ಗುರುತಿಸಿ

ಪರಿಶೀಲನೆ ಮಾಡಲಾಗಿದೆಯೇ (ಸಂಪೂರ್ಣ ವಿವರಗಳನ್ನು ದಾಖಲಾತಿಗಳೊಂದಿಗೆ ನೀಡುವುದು)?

ಶ್ರೀ ಡಿ. ಕೆ. ಶಿವಕುಮಾರ್ (ಇಂಧನ ಸಚಿವರು)

(ಅ) ಹೌದು.

(ಆ) ಹೊಸಪೇಟೆ ನಗರದ ಪಶ್ಚಿಮದಲ್ಲಿ (ಈ ಹಿಂದೆ ಉತ್ತರ ಎಂದು ಕರೆಯ ಲಾಗುತ್ತಿದ್ದ) 110 ಕೆ. ವಿ. ವಿದ್ಯುತ್ ಉಪ ಕೇಂದ್ರ ಮಂಜೂರಾಗಿರುತ್ತದೆ. ಸದರಿ ವಿದ್ಯುತ್ ಉಪಕೇಂದ್ರಕ್ಕೆ ಅಗತ್ಯವಿರುವ ಭೂಮಿಯನ್ನು ಗುರುತಿಸಲಾಗಿದ್ದು, ಭೂಮಿಯು ತುಂಗಭದ್ರ ಮಂಡಳಿಗೆ ಸೇರಿರುತ್ತದೆ. ಸದರಿ ಭೂಮಿಯನ್ನು ಕ.ವಿ.ಪ್ರ.ನಿ.ನಿ. ಗೆ ಲೀಸ್ ಆಧಾರದ ಮೇಲೆ ಒದಗಿಸಲು ಕೋರಲಾಗಿ, ತುಂಗಭದ್ರ ಮಂಡಳಿಯಿಂದ ಅನುಮೋ ದಿಸಲ್ಪಟ್ಟಿರುತ್ತದೆ. ತುಂಗಭದ್ರ ಮಂಡಳಿಯು ಲೀಸ್ ಮೊತ್ತವನ್ನು ತಿಳಿಸಿದ ನಂತರ, ಒಡಂಬಡಿಕೆ ಮಾಡಿಕೊಂಡು, ಜಮೀನನ್ನು ಸ್ವಾಧೀನಕ್ಕೆ ಪಡೆದುಕೊಂಡ ನಂತರ ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.

ಹೊಸಪೇಟೆ ತಾಲ್ಲೂಕಿನ ಬೈಲುವದ್ದಿಗೆರೆ ಗ್ರಾಮದಲ್ಲಿ 110 ಕೆ. ವಿ. ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾವನೆಯು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ಮುಂದೆ ಇದ್ದು, ತಾಂತ್ರಿಕ ಸಾಧ್ಯತೆಗಳನ್ನು ಪರಿಶೀಲಿಸಲಾಗುತ್ತಿದೆ.

ಕಬ್ಬು ಬೆಳೆಗಾರರಿಗೆ ಬಾಕಿ ವೇತನ

871 (1339); ಶ್ರೀ ಆನಂದಸಿಂಗ್

(ಅ) ರೈತರು ಬೆಳೆದ ಕಬ್ಬನ್ನು ಕಾರ್ಖಾನೆಗೆ ಪೂರೈಸಿದ ಮೇಲೆ ಒಂದು ಟನ್ ಕಬ್ಬಿಗೆ ಸರ್ಕಾರ ನಿಗದಿಪಡಿಸಿರುವ ವೈಜ್ಞಾನಿಕ ಬೆಲೆ ಎಷ್ಟು;